(ಇಂದು ದಿಃ 30-07-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋದಿಸಲಾಯಿತು)

**ಪಾಟಿ ಸವಾಲು ಃ- ಶ್ರೀ. ಎನ್.ಪಿ. ರವರಿಂದ ಃ-**

ನಾನು ಎಷ್ಟು ಸ್ವತ್ತುಗಳ ಮೇಲೆ ಈ ದಾವೆ ಸಲ್ಲಿಸಿದ್ದೇನೆ ಎಂದು ಹೇಳಲಾಗುವುದಿಲ್ಲ. ನನ್ನ ತಾತನಿಗೆ ಮಂಜೂರಾಗಿರುವ ಸ್ವತ್ತುಗಳ ಮೇಲೆ ಈ ದಾವೆ ಸಲ್ಲಿಸಿದ್ದೇನೆ. ನನ್ನ ತಾತ ಮುನಿಯಲ್ಲಪ್ಪನ ತಂದೆ ಹೆಸರು ಯರ್ರಪ್ಪ. ದಾವಾ ಸ್ವತ್ತುಗಳ ಚೆಕ್ಕುಬಂದಿ ಹೇಳಲಾಗುವುದಿಲ್ಲ. ನನ್ನ ತಾತನಿಗೆ ಇಬ್ಬರು ಸಹೋದರರು ಇರುತ್ತಾರೆ. ಅವರುಗಳು ಅಬ್ಬಯ್ಯ ಮತ್ತು ರಾಮಯ್ಯ. ಮೇಲೆ ಹೇಳಿದ ಅಬ್ಬಯ್ಯನವರಿಗೆ 3 ಜನ ಮಕ್ಕಳು ಎಂದರೆ ಸರಿ. ರಾಮಯ್ಯನಿಗೆ ಇಬ್ಬರು ಮಕ್ಕಳು ಇದ್ದರು. ದಾವಾ ಸ್ವತ್ತುಗಳಲ್ಲಿ ಮೊದಲು ಯರ್ರಪ್ಪ ಎಂಬುವವರು ಮೊದಲು ಉಳುಮೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ನಂತರ ಆತನ 3 ಜನ ಮಕ್ಕಳು ಸ್ವತ್ತುಗಳಲ್ಲಿ ಉಳುಮೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರೆಲ್ಲ ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಸರಿಯಲ್ಲ. ಮುನಿಯಲ್ಲಪ್ಪ ಎಂಬುವವರು ಒಟ್ಟು ಕುಟುಂಬದ ಪರವಾಗಿ ಸ್ವತ್ತುಗಳನ್ನು ಮಂಜೂರು ಮಾಡಲು ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ 1 ರಿಂದ 9 ಸ್ವತ್ತುಗಳು ಒಟ್ಟು ಕುಟುಂಬದ ಪರವಾಗಿ ಮುನಿಯಲ್ಲಪ್ಪನಿಗೆ ಮಂಜೂರಾಗಿದೆ ಎಂದರೆ ಸರಿಯಲ್ಲ. ಮಂಜೂರಾದ ನಂತರ ಮುನಿಯಲ್ಲಪ್ಪ ಮತ್ತು ಆತನ ಸಹೋದರರು ದಾವಾ ಐಟಂ 1 ರಿಂದ 9 ಸ್ವತ್ತುಗಳನ್ನು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಭಾಗಾಂಶದಲ್ಲಿ ಮುನಿಯಲ್ಲಪ್ಪನಿಗೆ 3 ಎಕರೆ 8 1/2 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ಉಳಿದ ಸ್ವತ್ತುಗಳು ಆತನ ಸಹೋದರರಿಗೆ ನೀಡಲಾಗಿದೆ ಎಂದರೆ ಸರಿಯಲ್ಲ. ಭಾಗ ಆದ ನಂತರ ಸಹೋದರರು ಪ್ರತ್ಯೇಕವಾಗಿ ಆಸ್ತಿಗಳನ್ನು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ತಾತನಿಗೆ ಇಬ್ಬರು ಹೆಂಡತಿಯರು ಇದ್ದರು. ಅವರುಗಳು ನಂಜಮ್ಮ ಮತ್ತು ಯಲ್ಲಮ್ಮ. ಸುಮಾರು 40 ವರ್ಷಗಳ ಹಿಂದೆಯೇ ಮೇಲೆ ಹೇಳಿದ ಇಬ್ಬರು ಹೆಂಡತಿಯರ ಮಕ್ಕಳು ಆಸ್ತಿಗಳನ್ನು ಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ದಾವಾ ಐಟಂ 7 ರಲ್ಲಿ 32

ಗುಂಟೆ ಮುನಿರಾಮಯ್ಯನವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸೀಕಲಪ್ಪ ಎಂಬುವವರಿಗೆ ಸದರಿ ಸ್ವತ್ತಿನಲ್ಲಿ 32 ಗುಂಟೆ ನೀಡಲಾಗಿದೆ ಎಂದರೆ ಸರಿಯಲ್ಲ. ವಾದಿಗಳಿಗೆ ಸರ್ವೆ ನಂ. 89/1 ರಲ್ಲಿ 1 ಎಕರೆ 13 ಗುಂಟೆ ನೀಡಲಾಗಿದೆ ಎಂದರೆ ಸರಿಯಲ್ಲ. ಭಾಗ ಆದ ನಂತರ 1 ನೇ ಹೆಂತಿಯ ಮಕ್ಕಳು ತಮ್ಮ ಭಾಗಾಂಶದಲ್ಲಿ ಮತ್ತು 2 ನೇ ಹೆಂಡತಿ ಮಕ್ಕಳು ತಮ್ಮ ಭಾಗಾಂಶಲ್ಲಿ ಪ್ರತ್ಯೇಕವಾಗಿ ಇದ್ದರು ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ಸಹೋದರರು 1967 ರಲ್ಲಿ ದಾವಾ ಐಟಂ 4 ರಲ್ಲಿ 1 ಎಕರೆ 13 ಗುಂಟೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1967 ರಿಂದ ನಮ್ಮ ಮತದಾರರ ಪಟ್ಟಿ ಪ್ರತ್ಯೇಕವಾಗಿರುತ್ತದೆ 1 ಮತ್ತು 2 ನೇ ಪ್ರತಿವಾದಿ ಮತದಾರರ ಪಟ್ಟಿ ಪ್ರತ್ಯೇಕವಾಗಿರುತ್ತದೆ. ನಾನು ಸರ್ವೆ ನಂ. 108/2 ರಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದೇನೆ. ಸದರಿ ಸ್ವತ್ತಿನ ವಿಸ್ತೀರ್ಣ 5 ಗುಂಟೆ ಇರುತ್ತದೆ. ದಾವಾ ಐಟಂ 5 ರಲ್ಲಿ ನಾನು ಮತ್ತು ನನ್ನ ಸಹೋದರ 3 ಗುಂಟೆ ಸ್ವತ್ತನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಬೇರೆ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ.

**(ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಸೀನಿಯರ್ ಸಿ.ಜೆ., ಆನೇಕಲ್.